2) ದ್ರಾಕ್ಷಿ ಬೆಳೆಯುವ ರೈತರಿಗೆ ಜಿಬ್ರಾಲಿಕ್ ಆಮ್ಲವನ್ನು ಒದಗಿಸುವುದು

ಶ್ರೀ ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿ.— ದ್ರಾಕ್ಷಿ ಬೆಳೆಯುವ ರೈತರಿಗೆ ಜಿಬ್ರಾಲಿಕ್ ಆಸಿಡ್‌ನ ಅವಶ್ಯಕತೆ ಇದೆ. ಆದರಲ್ಲಿಯೂ ರಾಜ್ಯದ ಕೊನೆಯ ತುದಿಯಲ್ಲಿ ಇರುವ ಬಿಜಾಪುರ ಜಿಲ್ಲೆಯು ದ್ರಾಕ್ಷಿ ಬೆಳೆಗಾರರಿಗೆ ಬಹಳ ತೊಂದರೆ ಆಗಿದ್ದು, ಮಹಾರಾಷ್ಟ್ರ ಅಥವಾ ಇನ್ನಿತರ ಕಡೆಗೆ ಅವರು ಹೇಳಿದ ದರ ಕೊಟ್ಟು ಹಂಚುವ ಪ್ರಸಂಗ ಬಂದಿದೆ. ಸರಕಾರ ದ್ರಾಕ್ಷಿ ಬೆಳೆಗಾರರಿಗೆ ಈ ರೀತಿ ಅವಶ್ಯಕವಾದ ರಸಾಯನಿಕ (ಜಿಬ್ರಾಲಿಕ್ ಆಸಿಡ್‌ನ್ನು) ಸರಿಯಾದ ರೀತಿಯಲ್ಲಿ ಸರಬರಾಜು ಮಾಡುವ ಸಲುವಾಗಿ ತಾತ್ಕಾಲಿಕ ಸರಕಾರದ ಗಮನ ಸೆಳೆಯಲಾಗಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಅಬಕಾರಿ ಮಂತ್ರಿ ಮತ್ತು ಆರೋಗ್ಯ ಸಚಿವರು).— ಮಾನ್ಯ ಅಧ್ಯಕ್ಷರೆ, ಕೃಷಿ ಮಂತ್ರಿ ತೋಟಗಾರಿಕೆ ರಾಜ್ಯಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡಬಯಸುತ್ತೇನೆ. ಜಿಬ್ರಾಲಿಕ್ ಆಮ್ಲವನ್ನು ದ್ರಾಕ್ಷಿ ಬೇಸಾಯದಲ್ಲಿ, ಅದರಲ್ಲಿಯೂ ಮುಂಖ್ಯವಾಗಿ ಬೀಜರಹಿತ (ಥಾಂಸನ್ ಸೀಡಲೆಸ್) ತಳಿಯಲ್ಲಿ ವಿಶೇಷವಾಗಿ ಬಳಸಲಾಗುತ್ತಿದೆ. ಅಕ್ಟೋಬರ್ ತಿಂಗಳಲ್ಲಿ ಬಳ್ಳಿಗಳನ್ನು ಚಾಟ್ಟಿ (ಪ್ರುನಿಂಗ್) ಮಾಡಿದ ನಂತರ ಬರುವ ಹೂ ಗೊಂಚಲುಗಳಿಗೆ ೩ ರಿಂದ ೪ ಹಂತಗಳಲ್ಲಿ ಹೂ ಮತ್ತು ಹೀಚುಗಳನ್ನು ಗೊಂಚಲಿನಲ್ಲಿ ತೆಳು ಮಾಡಲು ಹಾಗೂ ಹಣ್ಣಿನ ಗುಣ ಮಟ್ಟ, ಗಾತ್ರ, ಉತ್ತಮ ಫಸಲು ಪಡೆಯಲು ಈ ಜಿಬ್ರಾಲಿಕ್ ಆಮ್ಲವನ್ನು ಉಪಯೋಗಿಸಲಾಗುವುದು. ಹೂ ಗೊಂಚಲುಗಳ ಪ್ರಮಾಣವನ್ನು ಅನುಸರಿಸಿ ಪ್ರತಿ ಎಕರೆ ಒಂದಕ್ಕೆ ೪ ರಿಂದ ೫ ಗ್ರಾಂ ಜಿಬ್ರಾಲಿಕ್ ಆಮ್ಲ ಬೇಕಾಗುತ್ತದೆ.

ರಾಜ್ಯದಲ್ಲಿ ೧೭,೨೫೦ ಎಕರೆಯಲ್ಲಿ ದ್ರಾಕ್ಷಿ ಕೃಷಿ ಇದ್ದು, ಇದರ ಪೈಕಿ ಸುಮಾರು ೨,೫೦೦ ಎಕರೆ ಪ್ರದೇಶದಲ್ಲಿ ಥಾಂಸನ್ ಸೀಡಲೆಸ್ ತಳಿಯನ್ನು ಬೆಳೆಸಲಾಗುತ್ತಿದೆ ಇದರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ೧,೧೬೬ ಎಕರೆ ಪ್ರದೇಶದಲ್ಲಿ ದ್ರಾಕ್ಷಿ ಬೆಳೆ ಇದ್ದು ೧೨೬೬ ಎಕರೆಗಳಲ್ಲಿ ಥಾಂಸನ್ ಸೀಡ್‌ಲೆಸ್ ಬೆಳೆಸಲಾಗುತ್ತದೆ. ರಾಜ್ಯದಲ್ಲಿ ಜಿಬ್ರಾಲಿಕ್ ಆಮ್ಲದ ಒಟ್ಟು ಬೇಡಿಕೆ ಸುಮಾರು ೧೦ ಕೆ.ಜಿ.ಯಷ್ಟಿರುತ್ತದೆ.

ಈ ಜಿಬ್ರಾಲಿಕ್ ಆಮ್ಲವನ್ನು ಹೊರ ರಾಷ್ಟ್ರಗಳಾದ ಪೋಲಾಂಡ್, ಹಂಗೇರಿ, ಇಟಲಿ ಮುಂತಾದ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಜಿಬ್ರಾಲಿಕ್ ಆಮ್ಲವನ್ನು ಬೆಂಗಳೂರು ತೋಟಗಾರರ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘ ಸಹ ೨ ಕೆ.ಜಿ.ಯಷ್ಟು ಹಂಗೇರಿ ದೇಶದಿಂದ ಆಮದು ಮಾಡಿಕೊಂಡು ರಾಜ್ಯದ ದ್ರಾಕ್ಷಿ ಬೆಳೆಗಾರರಿಗೆ ಒದಗಿಸಿಕೊಡುತ್ತಿದೆ. ಇದೂ ಅಲ್ಲದೇ ಅನೇಕ ಖಾಸಗಿ ಸಂಸ್ಥೆಗಳೂ ಸಹ ಆಮ್ಲವನ್ನು ಹೊರದೇಶಗಳಿಂದ ತರಿಸಿಕೊಂಡು ಮಾರುತ್ತಿವೆ. ರೈತರ ಕೋರಿಕೆಯ ಮೇಲೆ ಕೇಂದ್ರ ಸರ್ಕಾರ ತನ್ನ ಆದೇಶ ಸಂಖ್ಯೆ. ೨೨೭ ಸಂ.೨೫೬.೮೪ ಕಸ್ಟಮ್ಸ್ ದಿನಾಂಕ: ೯-೧೦-೮೪ರ ಮೇರೆಗೆ ಜಿಬ್ರಾಲಿಕ್ ಆಮ್ಲದ ಮೇಲೆ ಕಸ್ಟಮ್ಸ್ ಸುಂಕವನ್ನು ತೆಗೆದು ಪೂರ್ಣ ಸುಂಕ ವಿನಾಯಿತಿ ನೀಡಲಾಗಿದೆ. ಈ ಅನುಕೂಲದಿಂದ ಒಂದು ಗ್ರಾಮಿನ ಜಿಬ್ರಾಲಿಕ್ ಆಮ್ಲದ ಪ್ಯಾಕೆಟ್ಟಿಗೆ ತಗಲುವ ವೆಚ್ಚ (ವಿವಿಧ ದೇಶಗಳಿಂದ ತರಿಸುವ ಮಾದರಿಯನ್ನು ಅನುಸರಿಸಿ) ೨೫ ರೂ.ಗಳಿಂದ ೩೦ ರೂ.ವರೆಗೆ ರಾಜ್ಯದಲ್ಲಿ ಮಾರಲಾಗುತ್ತಿದೆ. ಈ ಜಿಬ್ರಾಲಿಕ್ ಆಮ್ಲ ಪುಡಿ ರೂಪದಲ್ಲಿಯೂ ಮಾತ್ರೆ ರೂಪದಲ್ಲಿಯೂ ದೊರೆಯುತ್ತದೆ. ಇದನ್ನು ಮಾರುವ ಬಗ್ಗೆ ರಾಜ್ಯ ಸರ್ಕಾರದ ಮತಿಯಿಂದಾಗಲೀ, ಕೇಂದ್ರಸರ್ಕಾರದ ಮತಿಯಿಂದಾಗಲೀ ಯಾವ ನಿರ್ಬಂಧವೂ ಇಲ್ಲದಿರುವುದರಿಂದ ರೈತರಿಗೆ ಸುಲಭವಾಗಿ ಸಿಗುತ್ತದೆ.

ಬಿಜಾಪುರ ಜಿಲ್ಲೆಯ ದ್ರಾಕ್ಷಿ ಬೆಳೆಗಾರರಿಗೆ ಈ ಜಿಬ್ರಾಲಿಕ್ ಆಮ್ಲವನ್ನು ಬೆಂಗಳೂರಿನ ತೋಟದ ಬೆಳೆಗಾರರ ಮಾರಾಟ ಸಹಕಾರ ಸಂಘ ಹಾಗೂ ಇತರ ಖಾಸಗಿ ವರ್ತಕರುಗಳು ಸಹ ಒದಗಿಸುತ್ತಿದ್ದಾರೆ. ಈ ಜಿಬ್ರಾಲಿಕ್ ಆಮ್ಲವನ್ನು ಬಿಜಾಪುರ ಜಿಲ್ಲೆಯ ಬಾಗಲಕೋಟೆಯಲ್ಲಿರುವ ಯುನೈಟೆಡ್ ಗ್ರೇಪ್ ಗ್ರೋಯರ್ಸ್ ಅಸೋಸಿಯೇಷನ್ ಸಂಸ್ಥೆಯವರು ಸಹ ದ್ರಾಕ್ಷಿ ಬೆಳೆಗಾರರಿಗೆ ಮಾರಾಟ ಮಾಡುತ್ತಿದ್ದಾರೆ. ಈ ಜಿಬ್ರಾಲಿಕ್ ಆಮ್ಲವನ್ನು ನಮ್ಮ ದೇಶಕ್ಕೆ ಬೊಂಬಾಯಿಯಲ್ಲಿರುವ ಕೆಲವೊಂದು ಸಂಸ್ಥೆಗಳು ಹಾಗೂ ದೆಹಲಿಯಲ್ಲಿರುವ ಒಂದು ಸಂಸ್ಥೆ ನೇರವಾಗಿ ಆಮದು ಮಾಡಿಕೊಳ್ಳುತ್ತಿರುವುದರಿಂದ ಮಹಾರಾಷ್ಟ್ರದ ದ್ರಾಕ್ಷಿ ಬೆಳೆಗಾರರಿಗೆ ಈ ಜಿಬ್ರಾಲಿಕ್ ಆಮ್ಲ ಅತಿ ಸಮೀಪದಲ್ಲಿ ತೊಂದರೆಯಿಲ್ಲದೆ ಸಿಗುತ್ತದೆ ಬಿಜಾಪುರ ಜಿಲ್ಲೆಯು ಮಹಾರಾಷ್ಟ್ರದ ಗಡಿ ಜಿಲ್ಲೆಯಾಗಿದ್ದು ಸಾಂಗ್ಲಿ ಹಾಗೂ ಸೊಲ್ಲಾಪುರ ಜಿಲ್ಲೆಗಳಿಗೆ ಹೊಂದಿಕೊಂಡಿದ್ದು ಹೆಚ್ಚಿನ ಮಟ್ಟದಲ್ಲಿ ದ್ರಾಕ್ಷಿ ಬೆಳೆ ಮಾಡುತ್ತಿರುವುದರಿಂದ ಈ ಜಿಬ್ರಾಲಿಕ್ ಆಮ್ಲ ಅಲ್ಲಿಯ ಮುಂಕ್ತ ಮಾರುಕಟ್ಟೆಯಲ್ಲಿ ದೊರಕುತ್ತದೆ. ಇದರಿಂದಾಗಿ ಬಿಜಾಪುರ

ಜಿಲ್ಲೆಯ ರೈತರ ಹಾಗೂ ವರ್ತಕರ ಹೆಚ್ಚಿನ ಸಂಪರ್ಕ ಈ ಜಿಲ್ಲೆಗಳಲ್ಲಿರುವುದರಿಂದ ಆಮ್ಲವನ್ನು ಕೊಂಡುಕೊಂಡು ಬಂದು ಕೆಲವು ರೈತರು ಉಪಯೋಗಿಸುತ್ತಾರೆ. ಒಟ್ಟಿನಲ್ಲಿ ಜಿಬ್ಸಾಲಿಕ್ ಆಮ್ಲ ಹೆಚ್ಚಾಗಿ ದ್ರಾಕ್ಷಿ ಬೆಳೆಯುವ ಪ್ರದೇಶಗಳಲ್ಲಿ ಸಿಗುವುದರಿಂದ ದ್ರಾಕ್ಷಿ ಬೆಳೆಗಾರರಿಗೆ ಈ ಆಮ್ಲದ ಬಗ್ಗೆ ಯಾವ ಕೊರತೆಯೂ ಇದುವರೆಗೆ ಉದ್ಭವಿಸಿರುವುದಿಲ್ಲ. ಹಾಗೆ ಏನಾದರೂ ಇದು ದೊರೆಯುವ ಬಗ್ಗೆ ಬಿಜಾಪುರದಲ್ಲಿ ಕಷ್ಟವಿದ್ದ ಪಕ್ಷದಲ್ಲಿ ಇಲಾಖೆಯೂ ರೈತರಿಗೆ ಬೇಕಾದಷ್ಟು ಪ್ರಮಾಣದಲ್ಲಿ ಸೂಕ್ತ ಸಮಯದಲ್ಲಿ ಸರಬರಾಜು ಮಾಡುವ ವ್ಯವಸ್ಥೆ ಮಾಡಲು ಹಿಂದರಿಯುವುದಿಲ್ಲ. ಇದರ ಬಗ್ಗೆ ಕರ್ನಾಟಕ ಕೃಷಿ ಕೈಗಾರಿಕಾ ನಿಗಮಗಳೂ ಸಹ ಬರೆದು ಆ ಆಮ್ಲವನ್ನು ವಿತರಿಸಲು ಏನಂತಿಸಿಕೊಳ್ಳಲಾಗುವುದು.

೩. ದ. ಕ. ಜಿಲ್ಲೆಯ ಪಂಚಾಯತ್ ನೌಕರರು ತಮ್ಮ ಬೇಡಿಕೆಗಳಿಗೆ ಧರಣಿ ಮುಷ್ಕರ ಹೂಡಿರುವುದು

ಶ್ರೀಮತಿ ಮನೋರಮ ಮಧ್ವರಾಜ್.—ಸನ್ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪಂಚಾಯಿತಿಗಳಲ್ಲಿ ಸುಮಾರು ೧೦-೧೨ ವರ್ಷಗಳಿಂದ ಕೆಲಸ ಮಾಡುತ್ತಿರುವ ಗುಮಾಸ್ತರು, ವಸೂಲಿಗಾರರು, ಪೇದೆ, ಜಾಡಮಾಲಿ, ನೀರು ನಿಯಂತ್ರಕರು, ಬಾಲವಾಡಿ ಶಿಕ್ಷಕಿಯರು ಹಾಗೂ ಇತರ ನೌಕರರಿಗೆ ಸೂಕ್ತ ವೇತನ ಮತ್ತು ಸೇವಾ ಭದ್ರತೆಗಳಿಲ್ಲದೆ ಇರುವ ಬಗ್ಗೆ, ಸರಕಾರದವರು ಭರವಸೆ ನೀಡಿದ್ದಾಗ್ಯೂ ಈವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ, ಈಗ ಮಂಡಲಪಂಚಾಯಿತಿಗಳಲ್ಲಿ ಅನುಭವವಿರುವ ನೌಕರರುಗಳಿಗೆ ಸೂಕ್ತ ಬಡ್ತಿ ಹಾಗೂ ಪ್ರಾತಿನಿಧ್ಯ ನೀಡಬೇಕೆಂದು ಸದರಿ ನೌಕರರು ೯-೩-೧೯೮೭ರಿಂದ ವಿಧಾನಸೌಧದ ಮುಂದೆ ಧರಣಿ ನಡೆಸುತ್ತಿದ್ದು ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮುಂಚೆ ಸೂಕ್ತ ಕ್ರಮ ಕೈಗೊಂಡು ೧೦-೧೨ ವರ್ಷಗಳಿಂದ ಕೆಲಸ ಮಾಡುತ್ತಿರುವ ಪಂಚಾಯಿತಿ ನೌಕರರಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಇನ್ನೂ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಂದ ಅದನ್ನು ನಂತರ ತರಿಸಿಕೊಡುತ್ತೇವೆ.

೪. ಮಂಗಳೂರಿನ ಹೊಸ ಬಸ್ ನಿಲ್ದಾಣದಲ್ಲಿ ಅವಶ್ಯಕ ಸೌಲಭ್ಯಗಳ ವ್ಯವಸ್ಥೆ

೧-೦೦ ಪಿ. ಎಂ.

† ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಸಭಾಧ್ಯಕ್ಷರೆ, ಕೆ.ಎಸ್.ಆರ್.ಟಿ.ಸಿ.ಯವರು ಮಂಗಳೂರಿನಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಿ ಈಚೆಗೆ ಅದರ ಉದ್ಘಾಟನೆಯೂ ಆಯಿತು. ಆದರೆ ಅಲ್ಲಿ ಕೆಲವೊಂದು ಆತಂಕಗಳು ಎದುರಾಗಿ ತುಂಬಾ ತೊಂದರೆಯಾಗಿರುತ್ತದೆ. ಬಸ್ ನಿಲ್ದಾಣದಲ್ಲಿ ಮಂಜಾನೆ ರಿಕ್ಷಾ ಇನ್ನಿತರ ವಾಹನಗಳ ಅಡ್ಡಾದಿಡ್ಡಿ ಪಾರ್ಕಿಂಗ್‌ನಿಂದ ಸಾರ್ವಜನಿಕರಿಗೆ, ಇನ್ನಿತರ ದ್ವಿಚಕ್ರ ವಾಹನದವರಿಗೆ ನಿಲ್ದಾಣ ಪ್ರವೇಶಿಸಲು ತುಂಬಾ ಆತಂಕವಾಗಿರುತ್ತದೆ. ವಾಹನಗಳು ಎಲ್ಲಿ ನಿಲ್ಲಬೇಕೋ ಅಲ್ಲಿ ನಿಲ್ಲುವ ವ್ಯವಸ್ಥೆ ಆಗಬೇಕು, ನಿಲ್ದಾಣದಲ್ಲಿ ಉತ್ತಮ ಕ್ಯಾಂಟೀನ್ ವ್ಯವಸ್ಥೆಯೂ ಇಲ್ಲವಾಗಿದೆ. ಅನಧಿಕೃತವಾಗಿ ಚಿಕ್ಕಪುಟ್ಟ ಕ್ಯಾಂಟೀನ್ ತೆರೆದು ಪರಿಸರ ಕಲುಷಿತವಾಗುತ್ತಿದೆ. ಆ ಕಾರಣ ಉತ್ತಮವಾದ ಈ ಹೊಸ ಬಸ್ ನಿಲ್ದಾಣದಲ್ಲಿ ಉತ್ತಮ ರೀತಿಯ ಎಲ್ಲಾ ಸೌಲಭ್ಯ ವ್ಯವಸ್ಥೆಗಳು ಬೇಕಾಗಿದೆ. ಈ ಕುರಿತು ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಂಗಳೂರು ಬಸ್ ನಿಲ್ದಾಣದಲ್ಲಿ ರಿಕ್ಷಾ ಮತ್ತು ಇನ್ನಿತರ ವಾಹನಗಳು ಅಡ್ಡಾದಿಡ್ಡಿ ಪಾರ್ಕಿಂಗ್ ಮಾಡಿ ಪ್ರಯಾಣಿಕರಿಗೆ ತೊಂದರೆ ಕೊಡದಿರುವ ಬಗ್ಗೆ ತಿಳಿವಳಿಕೆ ನೀಡಲಾಗಿದೆ. ಬಸ್ ನಿಲ್ದಾಣದಲ್ಲಿ ಉಪಹಾರಗೃಹವನ್ನು ನಡೆಸುವ ಬಗ್ಗೆ ಆಸ್ಥೆಯೂ ಮಂಗಿದಿರುತ್ತದೆ ಮತ್ತು ಕೆಲವು ಕಾಮಗಾರಿ ಕೆಲಸಗಳಾದ ನೀರು ಸರಬರಾಜು ನೀರು ಶೇಖರಿಸುವ ಓವರ್‌ಹೆಡ್ ಟ್ಯಾಂಕ್ ಇತ್ಯಾದಿಗಳು ಮುಗಿದನಂತರ ಉಪಹಾರ ಗೃಹವನ್ನು ತಕ್ಷಣವೇ ತೆರೆಯಲಾಗುವುದು. ಪ್ರಯಾಣಿಕರಿಗೆ ಬೇಕಾದ ಮಿಕ್ಕ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ.